**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ, ಪಿರಿಯಾಪಟ್ಟಣ**

**ಸಿಸಿ 1175/2019**

| | | |
|---|---|---|
| ಸಾಕ್ಷಿಯ ಹೆಸರುಃ | ಗಣೇಶ ಎ.ಹೆಚ್ | ಫಿರ್ಯಾಸಾಃಃ 9 |
| ತಂದೆ ಹೆಸರುಃ | ಹನುಮೇಗೌಡ | ಚಾಸಾಃಃ 11 |
| ವಯಸ್ಸುಃ | 41 ವರ್ಷ | ಪ್ರಮಾಣೀಕರಿಸಿದ<br>ದಿಃ 10.06.2025. |
| ಉದ್ಯೋಗಃ | ಪೊಲೀಸ್ ನಿರೀಕ್ಷಕರು,<br>ಕೆ.ಎಸ್.ಲೇಔಟ್ ಟ್ರಾಫಿಕ್<br>ಪೊಲೀಸ್ ಠಾಣೆ, ಬೆಂಗಳೂರು | |
| ವಾಸಸ್ಥಳಃ | ಬೆಂಗಳೂರು | |

**ದಿಃ*10.06.2025* ರಂದು ಸಾಕ್ಷಿಯನ್ನು ವಿ.ಸಿ. ಮೂಲಕ ಹಾಜರು ಇದ್ದು ಪ್ರಮಾಣ ವಚನ ಬೋಧಿಸಿದೆ.**

**ಮುಖ್ಯ ವಿಚಾರಣೆ : ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ನಾನು ದಿ.04.10.2018 ರಿಂದ 03.10.2020 ರವರೆಗೆ ಪಿರಿಯಾಪಟ್ಟಣ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಉಪ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

1. ದಿಃ 22.02.2019 ರಂದು ಚಾಸಾ - 10 ರವರಿಂದ ಈ ಪ್ರಕರಣದ ಕಡತವನ್ನು ಪಡೆದು ತನಿಖೆ ಮುಂದುವರಿಸಿರುತ್ತೇನೆ.
2. ದಿಃ 22.02.2019 ರಂದು ಚಾಸಾ - 9 ರವರಿಂದ ಚಾಸಾ - 1 ರವರ ವೈದ್ಯಕೀಯ ಪ್ರಮಾಣ ಪತ್ರ ಪಡೆದುಕೊಂಡಿರುತ್ತೇನೆ.
3. ದಿಃ 23.02.2019 ರಂದು ಚಾಸಾ - 1 ರವರ ಕೈ ಮುರಿದು ಹೋಗಿರುವ ಬಗ್ಗೆ ವರದಿ ಪಡೆದು, ಅದರ ಆಧಾರದ ಮೇಲೆ ನ್ಯಾಯಾಲಯಕ್ಕೆ ನಿವೇದನೆ ಸಲ್ಲಿಸಿ, ಭಾ.ದಂ.ಸಂ.ಕಲಂ 324 ಬದಲಿಗೆ ಕಲಂ 326 ನ್ನು ಅಳವಡಿಸಿಕೊಂಡಿರುತ್ತೇನೆ.
4. ದಿಃ 06.03.2019 ರಂದು ಪಿರಿಯಾಪಟ್ಟಣ ಸರ್ಕಾರಿ ಆಸ್ಪತ್ರೆಯಿಂದ ಗಾಯದ ಪ್ರಮಾಣ ಪತ್ರ ಪಡೆದಿರುತ್ತೇನೆ.

5. ದಿಃ 15.03.2019 ರಂದು ಚಾಸಾ - 1 ರವರ ಡಿಸ್ಚಾರ್ಜ್ ಸಮರಿ ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ.

6. ದಿಃ 16.03.2019 ಚಾಸಾ - 8 ರವರ ಮುಂದೆ ಮುದ್ದೆಮಾಲನ್ನು ಹಾಜರುಪಡಿಸಿ, ಎಂಒ-1 ರ ದೊಣ್ಣೆಯಿಂದ ಹೊಡೆದರೆ ಗಾಯದ ಪ್ರಮಾಣ ಪತ್ರದಲ್ಲಿ ನಮೂದಿಸಿರುವ ಗಾಯಗಳು ಆಗುವ ಸಾಧ್ಯತೆ ಇರುವ ಬಗ್ಗೆ ಅಭಿಪ್ರಾಯ ನೀಡುವಂತೆ ನಿವೇದಿಸಿಕೊಂಡಿರುತ್ತೇನೆ.

7. ದಿಃ 08.05.2019 ರಂದು ಚಾಸಾ - 8 ರವರು ಅಭಿಪ್ರಾಯ ನೀಡಿದ್ದು, ಅದನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ.

8. ದಿಃ 08.05.2019 ರಂದು ಪಿರಿಯಾಪಟ್ಟಣ ಸರ್ಕಾರಿ ಆಸ್ಪತ್ರೆಯಿಂದ ಎಂ.ಎಲ್.ಸಿ ಎಕ್ಸ್ಟ್ರಾಕ್ಟ್ ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ.

9. ಆ ವೇಳೆಗೆ ಆರೋಪಿಯ ವಿರುದ್ಧ ಮೇಲ್ನೋಟಕ್ಕೆ ಆರೋಪ ಸಾಬೀತಾದ ಕಾರಣ ಆತನ ವಿರುದ್ಧ ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತೇನೆ.

10. ಸಾಕ್ಷಿಯು ಗಾಯದ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ - 7 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ - 7(ಬಿ) ಎಂದು ಗುರುತಿಸಲಾಯಿತು.

11. ಸಾಕ್ಷಿಯು ಚಾಸಾ - 8 ರವರಿಗೆ ನೀಡಿದ ನಿವೇದನೆ ಹಾಗೂ ಸದರಿಯವರು ನೀಡಿದ ಅಭಿಪ್ರಾಯವನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ - 8 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ - 8(ಬಿ) ಮತ್ತು 8(ಸಿ) ಎಂದು ಗುರುತಿಸಲಾಯಿತು.

12. ಸಾಕ್ಷಿಯು ನ್ಯಾಯಾಲಯಕ್ಕೆ ಸಲ್ಲಿಸಿರುವ ನಿವೇದನೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ - 10 ಎಂದು, ಸಾಕ್ಷಿಯ ಸಹಿಯನ್ನು ನಿಪಿ - 10(ಎ) ಎಂದು ಗುರುತಿಸಲಾಯಿತು.

13. ಸಾಕ್ಷಿಯು ವೈದ್ಯಕೀಯ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ - 11 ಎಂದು, ಸಾಕ್ಷಿಯ ಸಹಿಯನ್ನು ನಿಪಿ - 11(ಎ) ಎಂದು ಗುರುತಿಸಲಾಯಿತು.

14. ಸಾಕ್ಷಿಯು ಡಿಸ್ಚಾರ್ಜ್ ಸಮರಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ - 12 ಎಂದು, ಸಾಕ್ಷಿಯ ಸಹಿಯನ್ನು ನಿಪಿ - 12(ಎ) ಎಂದು ಗುರುತಿಸಲಾಯಿತು.

15. ಸಾಕ್ಷಿಯು ಎಂ.ಎಲ್.ಸಿ ಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ - 13 ಎಂದು, ಸಾಕ್ಷಿಯ ಸಹಿಯನ್ನು ನಿಪಿ - 13(ಎ) ಎಂದು ಗುರುತಿಸಲಾಯಿತು.

16. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಎಂಒ – 1 ನ್ನು ನೋಡಿ ಗುರುತಿಸಿರುತ್ತಾರೆ.

<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ</u>

1. ನೀವು ಸುಳ್ಳು ವೈದ್ಯಕೀಯ ಪ್ರಮಾಣ ಪತ್ರ ಪಡೆದು ಸುಳ್ಳು ಅಂತಿಮ ವರದಿ ಸಲ್ಲಿಸಿದ್ದೀರಾ ಎಂದರೆ ಸರಿಯಲ್ಲ.
2. ಎಂಒ – 1 ರಿಂದ ಹೊಡೆದರೆ ಗಾಯದ ಪ್ರಮಾಣ ಪತ್ರದಲ್ಲಿ ಹೇಳಿರುವ ಗಾಯಗಳು ಆಗುವುದಿಲ್ಲ ಎಂದರೆ ಸರಿಯಲ್ಲ.
3. ನಾನು ಈ ಪ್ರಕರಣದಲ್ಲಿ ಸರಿಯಾಗಿ ತನಿಖೆ ಮಾಡದೇ, ಆರೋಪಿಯು ಯಾವುದೇ ತಪ್ಪು ಮಾಡದೇ ಇದ್ದರೂ, ಚಾಸಾ - 1 ರವರಿಗೆ ಅನುಕೂಲವಾಗಲಿ ಎಂದು ಹಾಗೂ ಆರೋಪಿಗೆ ತೊಂದರೆ ಕೊಡುವ ಉದ್ದೇಶದಿಂದ, ಆರೋಪಿಯ ವಿರುದ್ಧ ಆರೋಪ ಸಾಬೀತಾಗದೇ ಇದ್ದರೂ, ಸುಳ್ಳು ಅಂತಿಮ ವರದಿ ಸಲ್ಲಿಸಿ, ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

***(ಸಾಕ್ಷಿಯ ವಿಚಾರಣೆಯನ್ನು ವಿ.ಸಿ. ಮೂಲಕ ದಾಖಲಿಸಿಕೊಳ್ಳಲಾಯಿತು)***

ಓ ಹೇ ಕೇ ಸ ಇ ಒ

ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.
ಪಿರಿಯಾಪಟ್ಟಣ.